**20. ವಿಷಯ: ರೈತರು ತುಂಡು ಭೂಮಿಯನ್ನು ಮಾರಾಟ ಮತ್ತು ವಿಭಾಗ ಮಾಡಿಕೊಳ್ಳುವ ಪ್ರತಿ ಜಮೀನಿಗೆ ಖಾತೆ ಮಾಡಿಸುವಾಗ 1200 ರೂ.ಗಳನ್ನು ಪಾವತಿಸಬೇಕಾಗಿರುವುದರಿಂದ ರೈತರಿಗೆ ಉಂಟಾಗುತ್ತಿರುವ ತೊಂದರೆಯ ಬಗ್ಗೆ.**

**ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):** ಮಾನ್ಯ ಅಧ್ಯಕ್ಷರೆ, ರೈತರು ತುಂಡು ಭೂಮಿಯನ್ನು ಮಾರಾಟ ಮತ್ತು ವಿಭಾಗ ಮಾಡಿಕೊಳ್ಳುವ ಪ್ರತಿ ಜಮೀನಿಗೆ ಖಾತೆ ಮಾಡಿಸುವಾಗ 1200 ರೂ.ಗಳನ್ನು ಪಾವತಿಸಬೇಕಾಗಿರುವುದರಿಂದ ರೈತರಿಗೆ ಉಂಟಾಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):** ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ರೈತರುಗಳು ತಮ್ಮ ಜಮೀನನ್ನು ಕ್ರಯ ಮತ್ತು ಇತರೆ ಉದ್ದೇಶಗಳಿಗಾಗಿ ಸರ್ವೆ ಮಾಡಿಸಲು ದಿನಾಂಕ: 01–03–2014 ರಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: ಕಂಇ 10 ಭೂದಾಸ 2014, ಬೆಂಗಳೂರು, ದಿನಾಂಕ:17–02–2014 ರನ್ವಯ ಸಾರ್ವಜನಿಕರಿಂದ ಅಳತೆಗಾಗಿ ಮೋಜಿಣಿ ವ್ಯವಸ್ಥೆಯಡಿಯಲ್ಲಿ ಸ್ವೀಕರಿಸುವ ಈ ಕೆಳಕಂಡ ತರಹದ ಅರ್ಜಿಗಳಿಗೆ ದರ ನಿಗದಿಪಡಿಸಲಾಗಿದೆ.

11ಇ, ಅಲಿನೇಷನ್ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ, ಅರ್ಜಿಗಳಿಗೆ

- ಗ್ರಾಮೀಣ ಪ್ರದೇಶದಲ್ಲಿ 2 ಎಕರೆವರೆವಿಗೂ ಪ್ರತಿ ಅರ್ಜಿಗೆ ರೂ.1200/– ಹಾಗೂ 2 ಎಕರೆಗಿಂತ ಹೆಚ್ಚಿದಲ್ಲಿ ಪ್ರತಿ ಭಾಗಶ: ಎಕರೆಗೆ ಹೆಚ್ಚುವರಿಯಾಗಿ ರೂ.100/– ಗಳನ್ನು ಹಾಗೂ
- ನಗರ ಪ್ರದೇಶದಲ್ಲಿ ಪ್ರತಿ 2 ಎಕರೆವರೆಗೆ ರೂ.2000/– ಹಾಗೂ ಹೆಚ್ಚುವರಿಯಾದ ಪ್ರತಿ ಭಾಗಶ: ಎಕರೆಗೆ ರೂ. 200/–ರಂತೆ ದರವನ್ನು

- ಗ್ರಾಮೀಣ ಪ್ರದೇಶದಲ್ಲಿ ಒಂದು ಸರ್ವೆ ನಂಬರಿಗೆ (ವಿಸ್ತೀರ್ಣ ಅನ್ವಯಿಸುವುದಿಲ್ಲ) ರೂ. 1000/– ಮತ್ತು ಒಂದಕ್ಕಿಂತ ಹೆಚ್ಚು ಸರ್ವೆ ನಂಬರುಗಳು ಇದ್ದಲ್ಲಿ ಪ್ರತಿ ಹೆಚ್ಚುವರಿ ಸರ್ವೆ ನಂಬರಿಗೆ ರೂ.100/– ರಂತೆ ಗರಿಷ್ಟ ಮೊತ್ತ ರೂ.2500/– ಗಳಿಗೆ ಮಿತಿಗೊಳಿಸಿ.
- ಹಾಗೂ ವಿಭಾಗ ಪ್ರಕರಣಗಳಲ್ಲಿ ಒಂದು ಸರ್ವೆ ನಂಬರಿಗೆ (ವಿಸ್ತೀರ್ಣ ಅನ್ವಯಿಸುವುದಿಲ್ಲ) ರೂ.1200/– ಹಾಗೂ ಒಂದಕ್ಕಿಂತ ಹೆಚ್ಚು ಸರ್ವೆ ನಂಬರುಗಳು ಇದ್ದಲ್ಲಿ ಪ್ರತಿ ಹೆಚ್ಚುವರಿ ಸರ್ವೆ ನಂಬರಿಗೆ ರೂ.200/– ರಂತೆ ಆದೇಶಿಸಿರುತ್ತದೆ.

ಪರವಾನಗಿ ಭೂಮಾಪಕರುಗಳಿಗೆ ಪ್ರತಿ ಪ್ರಕರಣಕ್ಕೆ ನೀಡಬೇಕಾಗಿರುವ ಸೇವಾ ಶುಲ್ಕ ರೂ.800/– ಮತ್ತು ಅಳತೆ ಮಾಡಿದ ಪ್ರತಿ ಹೆಚ್ಚುವರಿ ಬ್ಲಾಕ್‌ಗಳಿಗೆ ರೂ.150/–, ತಯಾರಿಸಲಾಗುವ ಕನಿಷ್ಟ 3 ಬ್ಲಾಕ್‌ಗಳಿಗೆ ರೂ. 450/– ಅಂದರೆ ಪರವಾನಗಿ ಭೂಮಾಪಕರ ಸೇವಾ ಶುಲ್ಕ ರೂ.1250/– ಹಾಗೂ ಆಡಳಿತಾತ್ಮಕ ವೆಚ್ಚ ರೂ. 80/– ರಿಂದ 100/– ಆಗುತ್ತದೆ. ಇದರಿಂದ ಒಟ್ಟಾರೆ ಪ್ರತಿ ಪ್ರಕರಣಕ್ಕೆ ರೂ.1400/– ನಿರ್ವಹಣಾ ವೆಚ್ಚವಾಗುತ್ತಿರುತ್ತದೆ. ಮೋಜಿಣಿ ವ್ಯವಸ್ಥೆಯಲ್ಲಿ ಅರ್ಜಿದಾರರಿಂದ ಸ್ವೀಕೃತವಾದ ಅರ್ಜಿ ಶುಲ್ಕದಿಂದಲೇ ಸರ್ಕಾರದ ಅನುದಾನವಿಲ್ಲದೆ ನಿರ್ವಹಿಸಲಾಗುತ್ತಿದೆ. ಸದ್ಯ ಜಾರಿಯಲ್ಲಿರುವ ಅರ್ಜಿ ಶುಲ್ಕವನ್ನು ಕಡಿಮೆ ಮಾಡಿದಲ್ಲಿ ಸರ್ಕಾರವು ಮೋಜಿಣಿ ವ್ಯವಸ್ಥೆ ನಿರ್ವಹಣೆಗೆ budgetary ಸಹಾಯ ಒದಗಿಸಬೇಕಾಗುತ್ತದೆ.

ಸರ್ಕಾರವು ಈಗ ಸಂಗ್ರಹಿಸುತ್ತಿರುವ ಸೇವಾಶುಲ್ಕವು ಕನಿಷ್ಠ ಮಟ್ಟದ್ದಾಗಿರುತ್ತದೆ. ಈ ಶುಲ್ಕವನ್ನು ಮತ್ತಷ್ಟು ಕಡಿತಗೊಳಿಸಲು ಸಾಧ್ಯವಿರುವುದಿಲ್ಲ. ಅಲ್ಲದೆ ಪರವಾನಗಿ ಭೂಮಾಪಕರು ತಮಗೆ ಈಗ ನೀಡುತ್ತಿರುವ ಸೇವಾ ಶುಲ್ಕವು ಕಡಿಮೆ ಇದ್ದು ಅದನ್ನು ಹೆಚ್ಚಿಸಬೇಕಾಗಿ ಮನವಿಗಳನ್ನು ನೀಡುತ್ತಿರುತ್ತಾರೆ. ಈ ಹಿನ್ನೆಲೆಯಿಂದಾಗಿ ವಿಭಾಗ ಮಾಡುವ ಪ್ರಕರಣಗಳಲ್ಲಿ ಸರ್ವೇ ಶುಲ್ಕವನ್ನು ಈಗ ಈ ಹಂತದಲ್ಲಿ ಪರಿಷ್ಕರಿಸುವುದು ಸಮಂಜಸವಾಗಿರುವುದಿಲ್ಲ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಸಚಿವರು ಉತ್ತರ ಕೊಟ್ಟಿದ್ದಾರೆ. ನಮ್ಮ ಪ್ರಶ್ನೆ ಇಷ್ಟೆ.

**ಅಧ್ಯಕ್ಷರು:** ಏನು?

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ತುಂಡು ಭೂಮಿಯನ್ನು survey ಮಾಡುವಂಥ ಒಂದು survey numberನಲ್ಲಿ 4–5 ಭಾಗ ಮಾಡಿ ಮಾರಾಟ ಮಾಡುವುದಕ್ಕೋ, ಮತ್ತೊಂದಕ್ಕೋ ಉಪಯೋಗಿಸುವಾಗ ಪ್ರತಿ ತುಂಡು ಭೂಮಿಯ ಭೂಮಿಗೆ 1,200/– ರೂ. ಕಟ್ಟಬೇಕೇ ಎನ್ನುವುದು ಒಂದು ಪ್ರಶ್ನೆ. ಎರಡನೆಯದಾಗಿ, ಇವತ್ತು ನೀವೇನು ಅತಿ ಹೆಚ್ಚು ಅಂದರೆ 2500 ರೂ.ವರೆಗೂ ಮಾಡಿದ್ದೀರಿ, ನಿಜವಾಗಿಯೂ ರೈತರ ಸರ್ಕಾರವೆಂದು ಹೇಳಿ survey ಮಾಡುವ ಕಾರ್ಯಕ್ಕೆ ಇಷ್ಟು ಹಣವನ್ನು ಏರಿಸಿಕೊಂಡು ಕುಳಿತರೆ ನಿಜವಾಗಿಯೂ ಬಡವರೇ? ಈಗ ಪ್ರತಿಯೊಂದಕ್ಕೂ ಖಾತೆ ಬೇಕು. ಏನು ಮಾಡಿಸುವುದಕ್ಕೆ ಹೋದರೂ ಖಾತೆ ಕೇಳುತ್ತಾರೆ. ಯಾವ ಸವಲತ್ತು ತೆಗೆದುಕೊಳ್ಳುವುದಕ್ಕೆ ಹೋದರೂ ಖಾತೆ ಕೇಳುತ್ತಾರೆ. ಸರ್ಕಾರದಿಂದ ಸಿಗುವುದು 2000 ರೂ. ಸವಲತ್ತು ಆದರೆ ನೀವು ಖಾತೆ ಮಾಡುವುದಕ್ಕೆ 1,200 ರೂ., 2,000 ರೂ. ತೆಗೆದುಕೊಂಡರೆ ಹೇಗೆ?

**ಅಧ್ಯಕ್ಷರು:** ಈಗ ಏನು ಮಾಡಬೇಕು ಹೇಳಿ?

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಅವರು ಸ್ಪಷ್ಟವಾಗಿ ಉತ್ತರ ಕೊಟ್ಟಿಲ್ಲ. survey number ಅನ್ನು ಭಾಗ ಮಾಡಿದಾಗ ಪ್ರತಿಯೊಂದು ಭಾಗಕ್ಕೂ 1200 ರೂ., 2000 ರೂ. ತೆಗೆದುಕೊಳ್ಳುತ್ತಾರೋ?

**ಅಧ್ಯಕ್ಷರು:** ಈಗ ಒಂದು ಕೆಲಸ ಮಾಡಿ. ವಿಶೇಷವಾದ ಚರ್ಚೆಗೆ ಹಾಕಿ. ಸರಿಯಾದ ಉತ್ತರ ಕೊಡುತ್ತಾರೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ನಾನು ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಏಕೆ ಎನ್ನತಕ್ಕಂಥದ್ದನ್ನೂ ಕೂಡ ಅವರಿಗೆ ಹೇಳಿದ್ದೇನೆ. ಏಕೆಂದರೆ, ಇದು licensed surveyours, ಹಿಡುವಳಿದಾರರು ಮಾಡಿಸಿಕೊಳ್ಳತಕ್ಕಂಥದ್ದು. ಮೊದಲು

licensed surveyours ಗೂ ಕೂಡ ತಮಗೆ ಗೊತ್ತಿರುವ ಹಾಗೆ ಒಂದು ಎಕರೆ survey ಮಾಡಿದರೆ 300 ರೂ. ಕೊಡುತ್ತಿದ್ದೆವು. ಈಗ ಅವರು ಸಂಘಟನೆಯಾಗಿ ಅದು ನಮಗೆ ಸಾಲುವುದಿಲ್ಲ ಎಂದು ಹೇಳಿದ ಮೇಲೆ ಅವರಿಗೆ ಸುಮಾರು 1,200 ರೂ.ವರೆಗೂ ಕೊಡಲಾಗುತ್ತಿದೆ. ಅವರೂ ಕೂಡ ನೋಡಬೇಕಾಗಿದೆ. ಅದನ್ನೂ ಕೂಡ ಸದನದಲ್ಲಿ ಪ್ರಸ್ತಾಪ ಮಾಡಿದರು.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಸರ್ಕಾರಿ survey ಗಾರರನ್ನೇನು ಮಾಡಿದಿರಿ? ಸರ್ಕಾರ ಒಂದು ಜಮೀನನ್ನು ಸರ್ವೆ ಮಾಡಿಸಿಕೊಡುವಂಥ ವಿಚಾರವಿದೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ರೈತರಿಂದ ಎಂದೂ ಕೂಡ ಒಂದೂ ದೂರು ಬಂದಿಲ್ಲ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಔಚಿತ್ಯತೆ ಸರ್ಕಾರಕ್ಕಿಲ್ಲವೇ?

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ಶಿವಲಿಂಗೇಗೌಡರವರೆ, ನಾನು ಆ ಸಮಯದಲ್ಲೂ ಕೂಡ ಹೇಳಿದೆ. ಮಾಡಿದ ಮೇಲೂ ಕೂಡ ಹೇಳಿದೆ. ರೈತರಿಂದೇನಾದರೂ ಕೂಡ ಹೊರೆಯಾಗುತ್ತದೆ ಎನ್ನುವ ರೀತಿಯಲ್ಲಿ ದೂರುಗಳು ಬಂದಿವೆಯೇ? ಬಂದಿಲ್ಲ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ರೈತರೆಲ್ಲ ನಮ್ಮ ಹತ್ತಿರಕ್ಕೆ ಬರುತ್ತಾರೆ. ನಿಮ್ಮ ಹತ್ತಿರಕ್ಕೆ ಏಕೆ ಬರುತ್ತಾರೆ?

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ನಾನು ವಿಚಾರಿಸಿದ್ದೇನೆ. ನಾನು ನಮ್ಮ ಅಧಿಕಾರಿಗಳನ್ನು ಕೇಳಿದ್ದೇನೆ, ಎಲ್ಲೂ ಕೂಡ ದೂರು ಬಂದಿಲ್ಲ.

**ಅಧ್ಯಕ್ಷರು:** ಅವರು ಹೇಳುವುದನ್ನಾದರೂ ಕೇಳಿ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ತಾವು ಹೇಳಿದ್ದೀರಿ, ಪರಿಶೀಲನೆ ಮಾಡೋಣ. ತಾವು ಕಳೆದ ವರ್ಷ ಬಜೆಟ್ ಭಾಷಣದ ಮೇಲೆ ಮಾತನಾಡುವಾಗಲೂ ಪ್ರಸ್ತಾಪ ಮಾಡಿದಿರಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಹೌದು.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ನಾನು ತಮಗೆ ಉತ್ತರ ಕೊಟ್ಟೆ. ನೀವು ಆವಾಗ ಕುಳಿತುಕೊಂಡಿರಿ. ಮತ್ತೆ ಇವತ್ತು ಗಮನ ಸೆಳೆಯುವ ಸೂಚನೆ ಮುಖಾಂತರ ತಂದಿದ್ದೀರಿ. ಇದರ ಮಧ್ಯೆ ಒಂದು ವರ್ಷದಲ್ಲಿ ಹೆಚ್ಚು ಹೊರೆಯಾಗಿದೆ ಎಂದು ಯಾವುದೇ ದೂರು ಬಂದಿಲ್ಲ. ಅವರಿಗೆ ಕೆಲಸವಾಗಬೇಕು. 11(e) sketch ಇರಲಿ ಅಥವಾ ತತ್ಕಾಲ್ ಪೋಡಿ ಇರಲಿ, pre alienation ಇವೆಲ್ಲ ಕೂಡ ಬಹಳ ಬೇಗ ಆಗತಕ್ಕಂಥದ್ದು ಇದೆ. ಆದ್ದರಿಂದ ಅವರಿಗೆ ಹೊರೆಯಾಗುವುದಿಲ್ಲ. ಇದನ್ನು ಮಾಡಿಸಿಕೊಳ್ಳತಕ್ಕಂಥ ಹಿಡುವಳಿದಾರರು ಮಾಡಿಸಿಕೊಳ್ಳುತ್ತಿದ್ದಾರೆ. ಅದು ಬಂದು ಪರಿಶೀಲನೆ ಮಾಡಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ನಮ್ಮಲ್ಲಿ ಹೆಚ್ಚಿಗೆ ಈ ಕಾರ್ಯಗಳು ಬಾಕಿ ಉಳಿದಿರುವುದರಿಂದ ರೈತರು ನಮ್ಮ ಬಳಿಗೆ ಬರುತ್ತಾರೆ. 2000 ರೂ. ಕಟ್ಟಬೇಕು, 1200 ರೂ. ಕಟ್ಟಬೇಕು, ಊರ ಹತ್ತಿರ ಜಮೀನಿದ್ದರೆ ಅದನ್ನು ಭಾಗ ಮಾಡಿ ಮಾರಿದರೆ ಪ್ರತಿ ಗುಂಟೆಗೆ 1200 ರೂ. ಕಟ್ಟಿ, ಅದಕ್ಕೆ ಖಾತೆ ಮಾಡಿಸಿ ನಾನು ಮಾರಾಟ ಮಾಡಬೇಕು.

**ಅಧ್ಯಕ್ಷರು:** ಇಲ್ಲಿ ಚರ್ಚೆಗೆ ಅವಕಾಶವಿಲ್ಲ. ಈ ವಿಷಯವನ್ನು ಚರ್ಚೆ ಮಾಡಬೇಕು ಎಂದರೆ ಪ್ರತ್ಯೇಕವಾಗಿ ಸೂಚನೆ ಕಳುಹಿಸಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ನೀವೇ ಸಮಯ ಕೊಡಬೇಕಲ್ಲ?

**ಅಧ್ಯಕ್ಷರು:** ಕೊಡುತ್ತೇನಲ್ಲ?

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಬೇಕಾದರೆ ಅದನ್ನು ಕೂಲಂಕೂಷವಾಗಿ ಚರ್ಚೆ ಮಾಡೋಣ.

**ಅಧ್ಯಕ್ಷರು:** ಕೊಡುತ್ತೇನೆ. ಹಾಕಿ. O.K. ಅರ್ಧ ಗಂಟೆ ಚರ್ಚೆಗೆ ಹಾಕಿ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ನಮ್ಮದು ಬೇಡಿಕೆ ವಿಷಯ ಬಂದಾಗ ಅದರ ಮೇಲೆ ನಾನು ಮಾತನಾಡುತ್ತೇನೆ. ನಮ್ಮ ಇಲಾಖೆಯ demands

ಬಗ್ಗೆ ಬಂದ ಸಮಯದಲ್ಲಿ ಮಾತನಾಡುತ್ತೇನೆ. ಅಷ್ಟರಲ್ಲಿ ಮತ್ತೆ ಇದರ ಬಗ್ಗೆ ಮಾಹಿತಿ collect ಮಾಡುತ್ತೇನೆ. ಅದನ್ನು ಮಾಡಿಕೊಡೋಣ ಬಿಡಿ.

**ಅಧ್ಯಕ್ಷರು:** ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ರಾತ್ರಿ 7 ಗಂಟೆ 6 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ:9–7–2015ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)**

**ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ಸದನದಲ್ಲಿ ನೀಡಲಾದ ಉತ್ತರಗಳು**

**ಅನುಬಂಧ–1**

**ಅಂಗನವಾಡಿ ಕೇಂದ್ರಗಳು**

**1369(1347); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)**

ಅ) ರಾಯಭಾಗ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು (ಗ್ರಾಮವಾರು ವಿವರ ನೀಡುವುದು)

ಆ) ಸ್ವಂತ ಕಟ್ಟಡ ಮತ್ತು ಬಾಡಿಗೆ ಹಾಗೂ ಇತರೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸದರಿ ಕೇಂದ್ರಗಳ ಸಂಖ್ಯೆ ಎಷ್ಟು;

ಇ) ಬಾಡಿಗೆ ಕಟ್ಟಡ ಹಾಗೂ ಇತರೆ ಕಟ್ಟಡಗಳಲ್ಲಿ ಸದರಿ ಕೇಂದ್ರಗಳನ್ನು ನಡೆಸುತ್ತಿರುವಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ.

ಈ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು?